ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :

ಅ) ಲಂಚ ನಿರೋಧಕ ಕಾಯ್ದೆ ಮತ್ತು ಲೋಕಾಯುಕ್ತ ಕಾಯ್ದೆಯ ಅನ್ವಯ ಈ ಕೆಳಗೆ ಹೇಳಿರುವ ಐದು ಮಂದಿ ಐ.ಎ.ಎಸ್. ಅಧಿಕಾರಿಗಳ ವಿರುದ್ಧ ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ.

1) ಶ್ರೀಮತಿ ನೀರಜಾ ರಾಜ್‌ಕುಮಾರ್

2) ಶ್ರೀ ಬಿ.ಎಸ್. ಪಾಟೀಲ್

3) ಹೆಚ್ ನಾಗರಾಜಶೆಟ್ಟ

4) ಶ್ರೀ ಜೆ.ಅಲೆಕ್ಸಾಂಡರ್

5) ಶ್ರೀ ಎಸ್. ಸ್ವತಂತ್ರರಾವ್

ಆ) ಕ್ರಮ ಸಂಖ್ಯೆ 1 ಮತ್ತು 2ರಲ್ಲಿ ಹೇಳಿರುವ ಅಧಿಕಾರಿಗಳ ವಿರುದ್ಧ ತನಿಖೆಯು ಮುಕ್ತಾಯಗೊಂಡಿದ್ದು ಆರೋಪಗಳ ರುಜುರಾತಾಗಿರುವುದಿಲ್ಲ ಕ್ರಮ ಸಂಖ್ಯೆ 3,4 ರಲ್ಲಿ ಹೇಳಿರುವ ಅಧಿಕಾರಿಗಳಿಗೆ ಸಂಬಂಧಿಸಿದಂತೆ ಲೋಕಾಯುಕ್ತದಿಂದ ಅಂತಿಮ ತನಿಖಾ ವರದಿಗಳು ಬಂದಿರುವುದಿಲ್ಲ, ಆದರೆ ಕ್ರಮ ಸಂಖ್ಯೆ 5 ರಲ್ಲಿ ಹೇಳಿರುವ ಅಧಿಕಾರಿಯವರಿಗೆ ಸಂಬಂದಿಸಿದಂತೆ ವರದಿ ಬಂದಿದ್ದು ಅದನ್ನು ಪರಿಶೀಲಿಸಲಾಗುತ್ತಿದೆ. ಈ ವರದಿಗಳು ರಹಸ್ಯಾವಾದವುಗಳಾದ್ದರಿಂದ ಅವುಗಳನ್ನು ಕಾನೂನು ಪ್ರಕಾರಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಪಾರ್ಥೇನಿಯಂ ನಾಶಪಡಿಸುವುದು

2111 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಪಾರ್ಥೇನಿಯಂ ನಾಶಕ್ಕೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು)

1) ನಗರ ಪಾಲಿಕೆಯ ಪೌರಕಾರ್ಮಿಕರು ಮತ್ತು ಗ್ಯಾಂಗ್‌ಮನ್‌ಗಳ ಸಹಾಯದಿಂದ ಮಳೆಗಾಲದಲ್ಲಿ ಪಾರ್ಥೇನಿಯಂ ಕಳೆಯನ್ನು ಕೀಳಲು ಕ್ರಮ ತೆಗೆದುಕೊಳ್ಳಲಾಗಿದೆ ಏಕೆಂದರೆ ಮಳೆಗಾಲದಲ್ಲಿ ಈ ಕಳೆಯನ್ನು ಸುಲಭವಾಗಿ ಮತ್ತು ಸಂಪೂರ್ಣವಾಗಿ ಕೀಳಬಹುದು. ಈ ಕಾರ್ಯಕ್ರಮವನ್ನು ಪಾದಚಾರಿ ರಸ್ತೆಗಳು, ರಸ್ತೆಬದಿಯ ಜಾಗ, ನಗರ ಪಾಲಿಕೆಯ ನಿವೇಶನಗಳು ಮತ್ತು ಸ್ಮಶಾನ ಪ್ರದೇಶದಲ್ಲಿ ನಡೆಸಲಾಗಿದೆ.

2) ನಗರ ಪಾಲಿಕೆಯ ಶೇಕಡಾ 40ರಷ್ಟು ಸೋಡಿಯಂ ಕ್ಲೋರೈಡ್ ದ್ರಾವಣವನ್ನು ಕಳೆಯ ಮೇಲೆ ಸಿಂಪಡಿಸುವ ಪ್ರಯೋಗವನ್ನು ಮಾಡಿ ಅದು ಸಫಲವಾಗಿರುವುದು ಕಂಡು ಬಂದಿದೆ. 275 ಖಾಲಿ ನಿವೇಶನಗಳ ಕಳೆಯ ಮೇಲೆ ದ್ರಾವಣವನ್ನು ಸಿಂಪಡಿಸಿ, ಕಳೆಯನ್ನು ಸಂಪೂರ್ಣವಾಗಿ ನಾಶಪಡಿಸಲಾಗಿದೆ. ಈ ಪದ್ಧತಿಯನ್ನು ಚಿಕ್ಕ ನಿವೇಶನಗಳ ಮೇಲೆ ಪ್ರಯೋಗಿಸಲಾಗಿದೆ.

3) ನಗರದ ವಿವಿಧ ಭಾಗಗಳಲ್ಲಿ ತಗಸೆ ಬೀಜಗಳನ್ನು ಪಾರ್ಥೇನಿಯಂ ಇರುವ ಸ್ಥಳದಲ್ಲಿ ಭತ್ತಿ ಈ ಕಳೆಯ ಬೆಳವಣಿಗೆಯನ್ನು ತಡೆಗಟ್ಟಲಾಗುತ್ತಿದೆ. ಈ ಕಾರ್ಯವನ್ನು ವಿಭಾಗದ ನಗರಸಭಾ ಸದಸ್ಯರುಗಳ ನೆರವಿನಿಂದ ಆಗಸ್ಟ್ 1991ರಲ್ಲಿ ಹಮ್ಮಿಕೊಳ್ಳಲಾಯಿತು. ಈ ತಗಸೆ ಬೀಜಗಳನ್ನು ಮುಖ್ಯ ರಸ್ತೆಯ ಬದಿ ರೈಲ್ವೆ ಮಾರ್ಗಗಳಲ್ಲಿ ಮತ್ತು ಸ್ಮಶಾನಗಳಲ್ಲಿ ಪರಿಚಯಿಸಲಾಗಿದೆ.

4) ಮೆಕ್ಸಿಕೋ ದೇಶದಿಂದ 1983ರಲ್ಲಿ ಆಮದು ಮಾಡಿಕೊಂಡ "ಜಿಗೋಗ್ರಮೆ ಬಿಕಲೋರೊಟ' ಎನ್ನುವ ಹುಳುಗಳನ್ನು ಭಾರತೀಯ ತೋಟಗಾರಿಕೆ ಸಂಶೋಧನೆ

ಸಂಸ್ಥೆಯವರು, ನಗರದ ವಿವಿಧ ಭಾಗಗಳಲ್ಲಿ ಮುಖ್ಯವಾಗಿ ಸುಲ್ತಾನ್ ಪಾಳ್ಯ, ಕಾವಲ್ ಬೈರಸಂದ್ರ, ಹೆನ್ನೂರು, ಮುನಿರೆಡ್ಡಿಪಾಳ್ಯ, ಆಗರಮ್, ಚೋಳನಾಯಕಹಳ್ಳಿ, ಅಮೃತಹಳ್ಳಿಗಳಲ್ಲಿ ಪರಿಚಯಿಸಿರುತ್ತಾರೆ. ಈಗ ಇದು ಹೆಚ್ಚಿನ ಸಂಖ್ಯೆಯಲ್ಲಿದೆ. ಈ ಹುಳುಗಳನ್ನು ಸಿಂಪಡಿಸುವ ಕಾರ್ಯಕ್ರಮವನ್ನು ನಗರದ ವಿವಿದೆಡೆಗಳಲ್ಲಿ ನಗರ ಪಾಲಿಕೆಯ ಎಲ್ಲಾ ನಗರಸಭಾ ಸದಸ್ಯರು ಭಾಗವಹಿಸುವ ಮೂಲಕ ತೆಗೆದುಕೊಂಡಿದೆ.

ಈ ಹುಳುಗಳು ಪಾರ್ಥೇನಿಯಂ ಕಳೆಯ ಎಲೆ ಕಾಂಡ ಮುಂತಾದುವುಗಳನ್ನು ಮಳೆಗಾಲದಲ್ಲಿ ತಿಂದು ಭೂಮಿಯೊಳಗೆ ಸುಮಾರು 6-7 ತಿಂಗಳ ಕಾಲ ಜೀವಿಸಬಲ್ಲದ್ದಾಗಿರುತ್ತದೆ.

ದಿನಾಂಕ 21-8-1991 ಆಚರಿಸಲಾದ ಪಾರ್ಥೇನಿಯಂ ಕಳೆಯ ನಿವಾರಣಾ ಸಪ್ತಾಹದ ಅಂಗವಾಗಿ ಹುಳುಗಳನ್ನು ಸಿಂಪಡಿಸುವ ಮತ್ತು ತೆಗಸಿ ಬೀಜಗಳನ್ನು ನಗರದ ವಿವಿಧ ಭಾಗಗಳಲ್ಲಿ ಬಿತ್ತುವ ಕಾರ್ಯಕ್ರಮವನ್ನು ನಗರಪಾಲಿಕೆಯು ತೆಗೆದುಕೊಂಡಿದೆ. ಈ ನಾಲ್ಕು ಪದ್ಧತಿಗಳನ್ನು ಅನುಸರಿಸುವ ಮೂಲಕ ಪಾರ್ಥೇನಿಯಂ ಕಳೆಯನ್ನು 2-3 ವರ್ಷಗಳಲ್ಲಿ ನಿಯಂತ್ರಿಸುವ ನಂಬಿಕೆಯನ್ನು ನಗರಪಾಲಿಕೆಯು ಹೊಂದಿದೆ.

ಗ್ರಾಮಾಂತರ ಪ್ರದೇಶದಲ್ಲಿ ಸಾರಾಯಿ ಅಂಗಡಿಗಳ ರದ್ದತಿ

2286 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗ್ರಾಮಾಂತರ ಪ್ರದೇಶದ ಬಹುತೇಕ ಜನರ ಬಡತನಕ್ಕೆ ಸಾರಾಯಿ ಕುಡಿತವೇ ಕಾರಣವೆಂಬ ವಿಚಾರವು ನಿಜವಲ್ಲವೇ?*

ಆ) *ಹಾಗಿದ್ದಲ್ಲಿ, ಗ್ರಾಮೀಣ ಪ್ರದೇಶದಲ್ಲಿ ಸಾರಾಯಿ ಅಂಗಡಿಗಳನ್ನು ಮುಚ್ಚಲು ಸರಕಾರ ಕೈಗೊಂಡಿರುವ ಕ್ರಮಗಳೇನು?*

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) :

ಅ) ಅಲ್ಲ- ಬಡತನಕ್ಕೆ ಇದೊಂದೇ ಕಾರಣವಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಟ್ಲ ಅರಕ್ಷಕ ಠಾಣೆಗೆ ವಾಹನ ಒದಗಿಸುವುದು

2179 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ಅರಕ್ಷಕ ಠಾಣೆಗಡಿ ಪ್ರದೇಶದಲ್ಲಿರುವುದರಿಂದ ಅದಕ್ಕೆ ವಾಹನದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ವಾಹನ ಸೌಲಭ್ಯವಿಲ್ಲದೆ ಇರುವುದರಿಂದ ಸಾರ್ವಜನಿಕರಿಗೆ ಮತ್ತು ಠಾಣೆ ವ್ಯವಹಾರಗಳಿಗೆ ತೊಂದರೆಯಾಗಿಲ್ಲವೇ?*

ಇ) *ವಾಹನ ಒದಗಿಸುವ ಇಚ್ಛೆ ಸರ್ಕಾರಕ್ಕಿದೆಯೇ? ಹಾಗಿದ್ದಲ್ಲಿ ಅದನ್ನು ಎಂದಿನಿಂದ ಒದಗಿಸಲಾಗುವುದು.*

ಶ್ರೀ ಧರ್ಮಸಿಂಗ್ (ಗೃಹ ಸಚಿವರು) ;

ಅ) ಹೌದು

ಆ) ಹೌದು

ಇ) ಹೌದು, ಹಾಲಿ ವ್ಯವಸ್ಥೆಯಲ್ಲಿ ಪ್ರತಿಯೊಂದು ಪೋಲೀಸ್ ಠಾಣೆಗೂ ಒಂದು ಪ್ರತ್ಯೇಕಜೀಪು ವಾಹನ ಒದಗಿಸಲಾಗುತ್ತಿಲ್ಲ. ಆದರೂ ಇನ್ನೂ ಜೀಪ್‌ಗಳನ್ನು ಪೋಲೀಸ್ ಇಲಾಖೆ ಪಡೆದುಕೊಳ್ಳಲು ಅಗತ್ಯವಾದ ಹಣವನ್ನು ಒದಗಿಸಿಕೊಳ್ಳಲು ಪ್ರಯತ್ನಿಸುತ್ತಿರಲಾಗಿದೆ.